# ಶಾರೂಕ್: ಹೆಚ್ಚಿದ ನಿರೀಕ್ಷೆ



ರಜನಿಕಾಂತ್ ಮತ್ತು ಅಕ್ಷಯ ಕುಮಾರ್ ನಟಿಸಿರುವ 2.0 ಚಿತ್ರ ಥಿಯೇಟರ್‌ನಲ್ಲಿ ಬಿಡುಗಡೆಯಾಗುವುದಕ್ಕೆ ಮುನ್ನ ಶಾರೂಕ್ ಖಾನ್‌ಗೆ ಸ್ವಲ್ಪ ಚಳಿಜ್ವರ ಬಂದದ್ದು ನಿಜ. ಚಿತ್ರದ ಟ್ರೇಲರ್ ಬಿಡುಗಡೆಯಾದ ಒಂದೇ ದಿನದಲ್ಲಿ 2.5 ಕೋಟಿ ಜನರು ಯೂಟ್ಯೂಬ್‌ನಲ್ಲಿ 2.0 ಅನ್ನು ನೋಡಿ ದಾಖಲೆ ನಿರ್ಮಿಸಿದ್ದರು. ನಿರ್ದೇಶಕ ಶಂಕರ್, ಈ ಹಿಂದಿನ ತಮ್ಮ ಎಲ್ಲ ಚಿತ್ರಗಳಲ್ಲೂ ಕಲೆಕ್ಷನ್ ವಿಷಯದಲ್ಲಿ ಹೊಸ ದಾಖಲೆಗಳನ್ನು ಬರೆದವರು. ಹಾಗಾಗಿ 2.0 ಚಿತ್ರದ ಯಶಸ್ಸು ಡಿಸೆಂಬರ್ ಕೊನೆಯಲ್ಲಿ ಬಿಡುಗಡೆಯಾಗುವ ತಮ್ಮ ಹೊಸ ಚಿತ್ರಕ್ಕೆ ಸ್ಪರ್ಧೆ ಒಡ್ಡಬಹುದು ಎನ್ನುವ ಆತಂಕ ಶಾರೂಕ್ ಖಾನ್‌ನದ್ದು.

ಆದರೆ 2.0 ಬಿಡುಗಡೆಯಾದ ದಿನದ ಕಲೆಕ್ಷನ್ ನೋಡಿ ಸದ್ಯಕ್ಕೆ ಶಾರೂಕ್ ನಿರಾಳರಾಗಿದ್ದಾರಂತೆ. 2.0 ಮೊದಲ ದಿನ 100 ಕೋಟಿ ರೂಪಾಯಿ ಕಲೆಕ್ಷನ್ ನಡೆಸಬಹುದು ಎಂಬ ಬಾಲಿವುಡ್ ಪಂಡಿತರ ನಿರೀಕ್ಷೆ ಹುಸಿಯಾಗಿದೆ. ಮೊದಲ ದಿನ ಅದು ಗಳಿಸಿದ್ದು 20.25 ಕೋಟಿ ರೂಪಾಯಿ. ಆದರೆ ಚಿತ್ರ ಒಟ್ಟು ಎಂಟು ಭಾಷೆಗಳಲ್ಲಿ ಬಿಡುಗಡೆಯಾಗಿದ್ದು ತಮಿಳು ಮತ್ತು ತೆಲುಗು ಕಲೆಕ್ಷನ್ ತೆಗೆದುಕೊಂಡರೆ ಈ ಅಂಕಿಸಂಖ್ಯೆ ಸ್ವಲ್ಪ ಹೆಚ್ಚಾಗಲೂಬಹುದು. ಇತ್ತೀಚೆಗೆ ಬಿಡುಗಡೆಯಾದ ಅಮೀರ್ ಖಾನ್ ಮತ್ತು ಅಮಿತಾಭ್ ನಟನೆಯ 'ಥಗ್ಸ್ ಆಫ್ ಹಿಂದೂಸ್ತಾನ್' ಚಿತ್ರ ಮೊದಲ ದಿನ ಗಳಿಸಿದ 50 ಕೋಟಿ ರೂಪಾಯಿಗೆ ಹೋಲಿಸಿದರೆ 2.0 ಕಲೆಕ್ಷನ್ ಕಡಿಮೆಯೇ.

ಶಾರೂಕ್ ಅಭಿನಯದ 'ಝೀರೊ' ಚಿತ್ರದ ಟ್ರೇಲರ್ ಬಿಡುಗಡೆಯಾದಾಗಲೂ ಭಾರೀ ಸಂಖ್ಯೆಯಲ್ಲಿ ಜನರು ಯೂಟ್ಯೂಬ್‌ನಲ್ಲಿ ವೀಕ್ಷಿಸಿದ್ದಾರೆ. ಆದರೆ ಶಾರೂಖ್ ಅಭಿನಯದ ಈ ಹಿಂದಿನ 2–3 ಚಿತ್ರಗಳು ಗಳಿಕೆಯಲ್ಲಿ ದೊಡ್ಡ ದಾಖಲೆಯನ್ನೇನೂ ನಿರ್ಮಿಸಿಲ್ಲ. ಹಾಗಾಗಿ ಹೊಸ ಚಿತ್ರ ಬಾಕ್ಸಾಫೀಸ್‌ನಲ್ಲಿ ಭರ್ಜರಿ ಸುದ್ದಿ ಮಾಡಲೇಬೇಕು ಎನ್ನುವುದು ಶಾರೂಕ್ ನಿರೀಕ್ಷೆ. ಈ ಮಧ್ಯೆ ರೋಹಿತ್ ಶೆಟ್ಟಿ ನಿರ್ದೇಶನದ 'ಸಿಂಬ' ಕೂಡಾ ತೆರೆಗೆ ಬರುವುದು ಶಾರೂಕ್ ತಲೆನೋವು ಹೆಚ್ಚಿಸಿದೆ. ಆನಂದ್ ಎಲ್ ರೈ ನಿರ್ದೇಶನದ 'ಝೀರೊ' ಚಿತ್ರವೇನಾದರೂ ಫ್ಲಾಪ್ ಆದಲ್ಲಿ, ಅದು ಬಾಲಿವುಡ್‌ನ ಸೂಪರ್‌ಸ್ಟಾರ್ ಪಟ್ಟದಿಂದ ಶಾರೂಕ್ ನಿರ್ಗಮನಕ್ಕೆ ಬಾಗಿಲು ತೆರೆದಂತೆಯೇ ಎನ್ನುತ್ತಿದ್ದಾರೆ ಪಂಡಿತರು.

# ಸುಂದರಿ ಸಾರಾ

ಸಾರಾ ಅಲಿ ಖಾನ್– ಸದ್ಯಕ್ಕೆ ಬಾಲಿವುಡ್‌ನಲ್ಲಿ ದೊಡ್ಡ ಸುದ್ದಿಯಲ್ಲಿರುವ ಸುಂದರಿ. ಅಪ್ಪ ಸೈಫ್ ಅಲಿ ಖಾನ್‌ಗೆ ಕೂಡಾ ಚಿತ್ರಜೀವನದ ಆರಂಭದಲ್ಲಿ ಇಷ್ಟೊಂದು ಪ್ರಚಾರ ಸಿಕ್ಕಿರಲಿಲ್ಲವೇನೋ? ಬಾಲಿವುಡ್‌ನಲ್ಲಿ ಸಾರಾ ಹೊಸ ಸಂಚಲನವನ್ನು ಉಂಟು ಮಾಡಲಿದ್ದಾಳೆ ಎನ್ನುವುದು ಪಂಡಿತರ ಲೆಕ್ಕಾಚಾರ. ಅದಕ್ಕೂ ಕಾರಣವಿದೆ. ವರ್ಷದ ಕೊನೆಗೆ ಬಿಡುಗಡೆಯಾಗಲಿರುವ ಎರಡು ದೊಡ್ಡ ಬ್ಯಾನರ್‌ನ ಸಿನಿಮಾಗಳಲ್ಲಿ ಈಕೆ ನಾಯಕಿ. ನಿರ್ದೇಶಕ ಅಭಿಷೇಕ್ ಕಪೂರ್ ಭಾರೀ ನಿರೀಕ್ಷೆ ಇಟ್ಟುಕೊಂಡಿರುವ 'ಕೇದಾರ್‌ನಾಥ್' ಚಿತ್ರದಲ್ಲಿ ಸಾರಾ ಅಭಿನಯದ ಬಗ್ಗೆ ಸಾಕಷ್ಟು ಒಳ್ಳೆಯ ಮಾತುಗಳು ಕೇಳಿಬಂದಿವೆ. ಸುಶಾಂತ್‌ಸಿಂಗ್ ಜೊತೆಗೆ ಸಾರಾ ಜೋಡಿಯೂ ಸಾಕಷ್ಟು ಸುದ್ದಿ ಮಾಡಿದೆ.

ಡಿಸೆಂಬರ್ 21ರಂದು ಬಿಡುಗಡೆಯಾಗಲಿರುವ 'ಸಿಂಬ'ದಲ್ಲೂ ಈಕೆಯೇ ನಾಯಕಿ. ಕಮರ್ಷಿಯಲ್ ಸಿನಿಮಾಗಳ ಯಶಸ್ಸಿನ ಸೂತ್ರಗಳನ್ನು ಕರತಲಾಮಲಕ ಮಾಡಿಕೊಂಡಿರುವ ರೋಹಿತ್ ಶೆಟ್ಟಿ ಈ ಚಿತ್ರದ ನಿರ್ದೇಶಕ. ಜೊತೆಗೆ ರಣವೀರ್ ನಾಯಕ. ದೀಪಿಕಾಳನ್ನು ಮದುವೆಯಾಗಿ ಇನ್ನೂ ಹನಿಮೂನ್ ಮೂಡ್‌ನಲ್ಲಿರುವ ರಣ್‌ವೀರ್, ಸದ್ಯಕ್ಕೆ ಬಾಲಿವುಡ್‌ನ ಅತ್ಯಂತ ಅದೃಷ್ಟವಂತ ನಾಯಕ. ಈತನ ಜತೆ ನಟಿಸುವ ಅವಕಾಶ ಆರಂಭದಲ್ಲೇ ಸಿಕ್ಕಿರುವುದು ಸಾರಾ ಅದೃಷ್ಟ ಎನ್ನಲಾಗುತ್ತಿದೆ.

ಈ ಮಧ್ಯೆ ಸಾರಾ ಅಲಿ ಮತ್ತು ಶ್ರೀದೇವಿ ಮಗಳು ಜಾಹ್ನವಿ ಕಪೂರ್ ನಡುವಣ ಸಿಟ್ಟು ಸೆಡವಿನ ಬಗ್ಗೆಯೂ ಸುದ್ದಿಗಳು ಹರಿದಾಡುತ್ತಿವೆ. ಇಬ್ಬರೂ ಬಾಲಿವುಡ್‌ನಲ್ಲಿ ಪರಸ್ಪರ ಪ್ರತಿಸ್ಪರ್ಧಿಗಳು ಎನ್ನುವವರಿದ್ದಾರೆ. ಆದರೆ ಸಾರಾ ಈ ಮಾತನ್ನು ಒಪ್ಪುವುದಿಲ್ಲ. 'ಸಿನಿಮಾಕ್ಕೆ ಬರುವುದಕ್ಕಿಂತ ಮುಂಚೆಯೇ ನಾವಿಬ್ಬರೂ ಒಳ್ಳೆಯ ಗೆಳತಿಯರು. ಆಕೆಯ ವೃತ್ತಿಜೀವನಕ್ಕೆ ಶುಭ ಕೋರುತ್ತೇನೆ. ನಮ್ಮಿಬ್ಬರ ಬಗ್ಗೆ ಮಾಧ್ಯಮಗಳಲ್ಲಿ ಪ್ರತಿಸ್ಪರ್ಧಿಗಳೆಂದು ಚಿತ್ರಿಸುವ ಬರಹಗಳನ್ನು ನೋಡಿ ಇಬ್ಬರೂ ನಗುತ್ತೇವೆ' ಎಂದಿದ್ದಾಳೆ ಸಾರಾ.

ಸ್ನೇಹ ಎಷ್ಟೇ ಇದ್ದರೂ ಬಾಲಿವುಡ್‌ನಲ್ಲಿ ಸ್ಪರ್ಧೆಯೇ ಮುಖ್ಯ. ಇಬ್ಬರೂ ಪ್ರತಿಭಾವಂತರು. ಆದರೆ 23ರ ಹರೆಯದ ಸಾರಾ ಸೌಂದರ್ಯದಲ್ಲಿ ಜಾಹ್ನವಿಗಿಂತ ಒಂದು ತೂಕ ಜಾಸ್ತಿ ಇದ್ದಂತೆ ಕಾಣಿಸುತ್ತಿದ್ದಾಳೆ. ಬಿಡುಗಡೆಯಾಗಲಿರುವ ಚಿತ್ರಗಳಲ್ಲಿ ಈಕೆಯ ನಟನೆಯೂ ಮೆಚ್ಚುಗೆ ಪಡೆದರೆ, ಮುಂದಿನ ದಿನಗಳಲ್ಲಿ ಬಾಲಿವುಡ್‌ನಲ್ಲಿ ಈ ಇಬ್ಬರು ನಾಯಕಿಯರು ನಂಬರ್ ಒನ್ ಸ್ಥಾನಕ್ಕೆ ಪ್ರತಿಸ್ಪರ್ಧಿಗಳಾದರೂ ಅಚ್ಚರಿಯಿಲ್ಲ.

■ ಬಿಂದು

